# IN THE COURT OF THE ADDL. SENIOR CIVIL JUDGE & JMFC., GUBBI

# **OS - 88/2025**

Witness present and duly sworn on : 09.02.2026.

Cross Examination: by Counsel for Defendant No.3. :

ಈ ದಾವೆಯನ್ನು ಸರ್ವೆ ನಂ.9/1, ದುರಸ್ತು ನಂತರ ಸರ್ವೆ ನಂ.21 ಜಮೀನಿಗೆ ಸಲ್ಲಿಸಿರುತ್ತೇನೆ. ಸರ್ವೆ ನಂ.21 ರ ಒಟ್ಟು ವಿಸ್ತೀರ್ಣ 4 ಎಕರೆ. ಮೂಲ ಸರ್ವೆ ನಂಬರ್ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಬನ್ನಿಗನಹಳ್ಳಿಯಲ್ಲಿ ಇರುತ್ತದೆ. ದಾವಾ ಆಸ್ತಿಯು ಪೂರ್ವಕ್ಕೆ ಬಸವಯ್ಯ, ಈಗ ರಂಗಯ್ಯ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ನಾಗಯ್ಯ ಮತ್ತು ಆತನ ಮಕ್ಕಳು, ದಕ್ಷಿಣಕ್ಕೆ ಹನುಮಂತಯ್ಯ, ಅಂಜಿನಪ್ಪ ಮತ್ತು ಶೆಟ್ಟಿಳಯ್ಯ. ದಾವೆಯ ವಿಚಾರಗಳನ್ನು ನಾನು ತಿಳಿಸಿರುತ್ತೇನೆ.

ಹನುಮಯ್ಯ ಬಿನ್ ರಂಗಯ್ಯ ಎಂದರೆ ನಮ್ಮ ಜನಾಂಗದವರು. ಸದರಿ ಹನುಮಂತಯ್ಯ ನವರು ಜಮೀನನ್ನು ಖರೀದಿ ಮಾಡಿರುತ್ತಾರೆ. ಯಲ್ಲಯ್ಯ ಮತ್ತು ಹನುಮಯ್ಯ ಅಣ್ಣ ತಮ್ಮಂದಿರು. ದಾವಾ ಸರ್ವೆ ನಂಬರ್ ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ. ಸಾಕ್ಷಿ ಮುಂದುವರೆದು ಭಾಗದ ನಂತರ ಹನುಮಂತಯ್ಯ ರವರಿಗೆ 2 ಎಕರೆ ಮತ್ತು ಯಲ್ಲಯ್ಯ ರವರಿಗೆ 2 ಎಕರೆ ಬಂದಿರುತ್ತದೆ. ಸದರಿ ವಿಭಾಗ ತೋರಿಸಲು ನಾನು ದಾಖಲೆಯನ್ನು ಹಾಜರುಪಡಿಸಿಲ್ಲ. ಹನುಮಂತಯ್ಯ ಮತ್ತು ಯಲ್ಲಯ್ಯ ರವರು ವಿಭಾಗ ಮಾಡಿಕೊಂಡಿಲ್ಲ ಮತ್ತು ಒಟ್ಟು ಕುಟುಂಬದಲ್ಲಿ ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ.

ಬಾಯಿ ಮಾತಿನ ಮೂಲಕ ವಿಭಾಗ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗಳ ಹೆಸರಿನಲ್ಲಿ ಖಾತೆ ಪಹಣಿ ಇತ್ತಾ ಎಂದರೆ ನನಗೆ ಗೊತ್ತಿಲ್ಲ.

1970 ರಲ್ಲಿ ಆಸ್ತಿಯನ್ನು ಹನುಮಯ್ಯ ರವರಿಗೆ ಯಲ್ಲಯ್ಯನವರು ಮಾರಾಟ ಮಾಡಿದ್ದರು. 1970 ರಲ್ಲಿ ಯಲ್ಲಯ್ಯ ರವರ ಹೆಸರಿಗೆ ಆಸ್ತಿಯು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರ್ ಗೊಮಾಳ ಸರ್ಕಾರಿ ಜಮೀನು ಎಂದರೆ ಸರಿ. ವಿಭಾಗ ಆಗಿದ್ದರೆ ಖಾತೆ ಪಹಣಿ ಬರುತ್ತಿತ್ತು ಎಂದರೆ ಖಾತೆ ಪಹಣಿ ಬಂದಿರುವುದಿಲ್ಲ. ನಿಪಿ-1 ಮತ್ತು 2 ದಾಖಲೆಗಳಲ್ಲಿ 3 ನೇ ಪ್ರತಿವಾದಿಯು ಸಹಿ ಮಾಡಿಲ್ಲ ಮತ್ತು ಸದರಿ ದಾಖಲೆಗಳು ಸೃಷ್ಟಿಸಿರುವ ದಾಖಲೆಗಳು ಎಂದರೆ ಸರಿಯಲ್ಲ. ಹನುಮಂತಯ್ಯನವರು ಜೀವಂತ ಇಲ್ಲ ಎಂದರೆ ಸರಿ. ಅವರಿಗೆ ಇಬ್ಬರು ಮಕ್ಕಳು. ಹನುಮಂತಯ್ಯನವರ ಮಕ್ಕಳು ಮತ್ತು 3 ನೇ ಪ್ರತಿವಾದಿಯು ದಾವಾ ಆಸ್ತಿಯ ಜಂಟಿ ಸ್ವಾಧೀನವನ್ನು ಅನುಭವಿಸುತ್ತಿದ್ದಾರೆಂದರೆ ಸರಿಯಲ್ಲ. 3 ನೇ ಪ್ರತಿವಾದಿ ಶಿಕ್ಷಕರು ಎಂದರೆ ಸರಿ. ಆದ ಕಾರಣ ಅವರಿಗೆ ಸಾಕಷ್ಟು ಸಂಬಳ ಬರುತ್ತದೆ ಎಂದರೆ ಸರಿ. ಆದ ಕಾರಣ ಅವರು ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕ್ರಯಪತ್ರಗಳನ್ನು ಸೃಷ್ಟಿಸಿದ್ದೇನೆಂದರೆ ಸರಿಯಲ್ಲ. ನಾನು ದಾವಾ ಆಸ್ತಿಯಲ್ಲಿ ಯಾವತ್ತಿಗೂ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದದು ಕ್ರಯದ ನಂತರ 1977 ರಿಂದ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದೇನೆ. ನನ್ನ ಸ್ವಾಧೀನವನ್ನು ತೋರಿಸಲು ಕ್ರಯಪತ್ರ ಮತ್ತು ಇ.ಸಿ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದೇನೆ.

ಕ್ರಯದ ನಂತರ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿರಲಿಲ್ಲ. ನಾನು ಖರೀದಿ ಮಾಡಿ ಸುಮಾರು 48 ವರ್ಷಗಳಾಗಿವೆ ಎಂದರೆ ಸರಿಯಲ್ಲ. ಆದ ಕಾರಣ ನನ್ನ ಕ್ರಯಪತ್ರ

ಸೃಷ್ಟಿಸಿರುವ ದಾಖಲೆ ಎಂದರೆ ಸರಿಯಲ್ಲ. ಕ್ರಯಪತ್ರದ ನಂತರ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಬಹುದಿತ್ತು ಎಂದರೆ ಯಲ್ಲಯ್ಯ ರವರು ಮಾಡಿಕೊಡುತ್ತೇವೆಂದು ಹೇಳಿದ್ದರು. ಟಿ.ಆರ್ ಯಲ್ಲಯ್ಯನವರು ಯಾವುದೇ ದಾಖಲೆ ಮಾಡಿಕೊಟ್ಟಿರಲಿಲ್ಲ. ನಾನು ದಾಖಲೆಯನ್ನು ಸೃಷ್ಟಿಸಿ ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಮತ್ತು ಸ್ವಾಧೀನ ಇಲ್ಲದೆ ಇದ್ದರು ಸಹ ಕ್ರಯಪತ್ರವನ್ನು ಸೃಷ್ಟಿಸಿದ್ದೇನೆಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ.

Cross Examination: by Counsel for Defendant No.1 and 2. :

Deferred as counsel prays time.

(Typed to my dictation in open court)

R.O.I & A.C.

Addl. Senior Civil Judge and
JMFC., Gubbi